# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ನಿರ್ಮಿಸಿರುವ ಕಾಮಗಾರಿಗಳಲ್ಲಿ ಅವ್ಯವಹಾರದ ಬಗ್ಗೆ ಶಿಸ್ತು ಕ್ರಮ.

**ಓದಲಾಗಿದೆ:**

1. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಪತ್ರ ಸಂಖ್ಯೆ: ಜಅಇ/ಆಡಳಿತ-3/ವಿನಿ-13/22/09-10, ದಿನಾಂಕ: 13-07-2009.
2. ಸರ್ಕಾರದ ಕಾರಣ ಕೇಳುವ ಪತ್ರದ ಸಂಖ್ಯೆ: ಕೃತೋಇ 63 ಕೃಪವಿ 2007, ದಿನಾಂಕ: 22-09-2009.
3. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 67 ಕೃಪವಿ 2007, ದಿನಾಂಕ: 01-01-2011 ಮತ್ತು ದಿನಾಂಕ:23-03-2011.
4. ವಿಚಾರಣಾಧಿಕಾರಿಯವರ ವರದಿ ದಿನಾಂಕ: 24-01-2013.

*********

**ಪ್ರಸ್ತಾವನೆ:**

ಚಾಮರಾಜನಗರ ಜಿಲ್ಲೆಯ, ಕೊಳ್ಳೇಗಾಲ ತಾಲ್ಲೂಕಿನ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ 2006-07ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳನ್ನು ಇಲಾಖೆಯ ಮಾರ್ಗಸೂಚಿಗಳಿಗೆ ಅನುಗುಣವಾಗಿ ಕೈಗೊಂಡಿರುವುದಿಲ್ಲವೆಂದು ಮತ್ತು ಅಂದಾಜು ಪತ್ರಿಕೆಗಳಲ್ಲಿ ಮಂಜೂರಾದ ಅಂಶಗಳಿಗೆ ಅನುಗುಣವಾಗಿ ಕಾಮಗಾರಿಗಳನ್ನು ನಿರ್ವಹಿಸದೆ ಲೋಪೆಸಗಿರುತ್ತಾರೆಂಬ ಆಪಾದನೆಗೆ ಸಂಬಂಧಿಸಿದಂತೆ ಕೆಳಕಂಡವರ ಮೇಲೆ ಶಿಸ್ತು ಕ್ರಮವಹಿಸುವಂತೆ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು, ಇವರು ಮೇಲೆ ಕ್ರಮಾಂಕ(1)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

1) ಶ್ರೀ ಕೆ.ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿ(ನಿವೃತ್ತ)
2) ಶ್ರೀ ಮರಿಸ್ವಾಮಿ ನಾಯಕ, ಸಹಾಯಕ ಕೃಷಿ ಅಧಿಕಾರಿ,
3) ಶ್ರೀ ತಿಮ್ಮರಾಯಿ, ಕೃಷಿ ಸಹಾಯಕ.

ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕ್ರಮಾಂಕ (2) ರಲ್ಲಿ ಓದಲಾದ ಸರ್ಕಾರದ ಕಾರಣ ಕೇಳುವ ಪತ್ರದೊಂದಿಗೆ ದೋಷಾರೋಪಣ ಪಟ್ಟಿಯನ್ನು ಮೇಲ್ಕಂಡ ಅಧಿಕಾರಿ/ನೌಕರರುಗಳ ಮೇಲೆ ಜಾರಿಮಾಡಲಾಯಿತು. ಸದರಿ ಕಾರಣ ಕೆಳುವ ಪತ್ರವನ್ನು ಸ್ವೀಕರಿಸಿದ ಮೇಲ್ಕಂಡ ಅಧಿಕಾರಿ/ನೌಕರರು ತಮ್ಮ ಮೇಲಿರುವ

--2--

ಆರೋಪಗಳ ಬಗ್ಗೆ ಅವರು ಯಾವುದೇ ಲಿಖಿತ ಹೇಳಿಕೆಯನ್ನು ನೀಡದೇ ಇದ್ದುದರಿಂದ ಅವರ ಹೇಳಿಕೆ ಏನೂ ಇಲ್ಲವೆಂದು ಭಾವಿಸಿ, ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಮೇಲೆ ಕ್ರಮಾಂಕ: (3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ. ಎಂ.ಜಿ. ಹಿರೇಮಠ, ನಿವೃತ್ತ ಜಿಲ್ಲಾ ಮತ್ತು ಸೇಷನ್ಸ್ ನ್ಯಾಯಾಧೀಶರು, ಬೆಂಗಳೂರುರವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಅಧೀಕ್ಷಕರು, ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ಚಾಮರಾಜನಗರ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಕ್ರಮಾಂಕ (4)ರಲ್ಲಿ ಓದಲಾದ ಪತ್ರದಲ್ಲಿ ಪ್ರಕರಣದ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಅವರು ತಮ್ಮ ವರದಿಯಲ್ಲಿ ಮೇಲ್ಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳಿಗೆ ಸಂಬಂದಿಸಿದಂತೆ ವಿಚಾರಣೆ ನಡೆಸಿ ನೀಡಿದ ವರದಿಯಲ್ಲಿ ಅವರ ಮೇಲಿನ ಆರೋಪಗಳು ಈ ಕೆಳಕಂಡ ಕಾರಣಗಳಿಂದ ರುಜುವಾತಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

ಪ್ರಕರಣದಲ್ಲಿ ಸರ್ಕಾರದ ಪರವಾಗಿ ಇಬ್ಬರು ಸಾಕ್ಷಿದಾರರನ್ನು ಗುರುತಿಸಲಾಗಿದ್ದು, ಆರೋಪಿತ ಅಧಿಕಾರಿಯವರಾದ **ಶ್ರೀ ಮರಿಸ್ವಾಮಿ ನಾಯಕ, ಸಹಾಯಕ ಕೃಷಿ ಅಧಿಕಾರಿ ಹಾಗೂ ಶ್ರೀ ತಿಮ್ಮರಾಯಿ, ಕೃಷಿ ಸಹಾಯಕರು ಇವರು ನಿಧನ ಹೊಂದಿರುತ್ತಾರೆಂದು** ಹಾಗೂ **ಶ್ರೀ ಕೆ. ಶಿವಲಿಂಗೇಗೌಡ ಇವರು ಸೇವೆಯಿಂದ ನಿವೃತ್ತರಾಗಿರುತ್ತಾರೆ.** ಎಂಬ ಬಗ್ಗೆ ವರದಿ ಮಾಡಿ ಅಪಾದಿತರ ರಕ್ಷಣಾ ಸಹಾಯಕರಾದ ಶ್ರೀ ನಾಗರಾಜು, ಇವರು ವಿಚಾರಣಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಮೃತ ಅಪಾದಿತರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮಗಳಡಿ ವಿಚಾರಣೆ ನಡೆಸುವುದು ನ್ಯಾಯ ಸಮ್ಮತವಲ್ಲವೆಂದು ತಮ್ಮ ವಾದವನ್ನು ಮಂಡಿಸುತ್ತಾ, ತಮ್ಮ ವಾದಕ್ಕೆ ಪುಷ್ಟಿಕರಿಸುವ ಸಲುವಾಗಿ ಉಚ್ಚ ನ್ಯಾಯಾಲಯದ ರಿಟ್ **ಅರ್ಜಿ ಸಂ. 32887/2004(ಎಸ್.ಕೆ.ಎಟಿ)** ಮೊಕದ್ದಮೆಯಲ್ಲಿ ದಿನಾಂಕ: 16-08-2004ರಲ್ಲಿ ನೀಡಿದ ತೀರ್ಪಿನ ಪ್ರತಿಯನ್ನು ಸಲ್ಲಿಸಿ, ಮೃತ ಅಪಾದಿತರ ವಾರಸುದಾರರ ವಿರುದ್ಧ ಹೂಡಲಾಗಿರುವ ಇಲಾಖಾ ಪ್ರಕ್ರಿಯೆಯನ್ನು ಕೈಬಿಡಬೇಕೆಂದು ಕೋರಿಕೊಂಡಿರುತ್ತಾರೆಂದು ತಿಳಿಸಿರುತ್ತಾರೆ. ವಿಚಾರಣಾಧಿಕಾರಿಗಳು ರಿಟ್ ಅರ್ಜಿ ಸಂ. 32887/2004 (ಎಸ್.ಕೆ.ಎಟಿ) ಯಲ್ಲಿ ತೀರ್ಪಿನ ಸಾರಾಂಶವನ್ನು ಉಚ್ಚರಿಸುತ್ತಾ, ಸದರಿ ತೀರ್ಪಿನ ಅನ್ವಯ ಮೃತ ಅಪಾದಿತರ ವಾರಸುದಾರರ ವಿರುದ್ಧ ಕರ್ನಾಟಕ ನಾಗರಿಕ ಸೇವಾ

(ಸಿ.ಸಿ.ಎ) ನಿಯಮಗಳಡಿ ಇಲಾಖಾ ವಿಚಾರಣೆ ನಡೆಸಲು ಬರುವುದಿಲ್ಲ. ಆದ್ದರಿಂದ ಸದರಿ **ಅಧಿಕಾರಿಗಳ ವಿರುದ್ದದ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ ಎಂದು ವಿಚಾರಣಾ ವರದಿಯಲ್ಲಿ ಅಭಿಪ್ರಾಯ ಪಟ್ಟಿರುತ್ತಾರೆ.**

ಮತ್ತೊಬ್ಬ ನಿವೃತ್ತ ಆರೋಪಿತ ಅಧಿಕಾರಿಯವರಾದ ಶ್ರೀ. ಕೆ. ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿಯವರ ಮೇಲಿರುವ ಆರೋಪದ ಬಗ್ಗೆ ಶ್ರೀ ಲಕ್ಷ್ಮಣ ಕಳ್ಳಣ್ಣನವರ, ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಚಾಮರಾಜನಗರ ಹಾಗೂ 2ನೇ ಸಾಕ್ಷಿ ಶ್ರೀ ಸೋಮಶೇಖರ್, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ ಇವರುಗಳ ಸಾಕ್ಷಿಯನ್ನು ಪಡೆಯಲಾಗಿದ್ದು, ತಾವು ದಿನಾಂಕ: 16-10-2007ರಂದು ಸ್ಥಳ ಪರಿಶೀಲನೆ ಮಾಡಿರುವುದಾಗಿ ತಿಳಿಸಿ, ಸದರಿ ಸ್ಥಳ ಪರಿಶೀಲನೆ ಮಾಡುವಾಗ ಶ್ರೀ ತಿಮ್ಮರಾಯಿ (ಮೃತ ಅಪಾದಿತ ಅಧಿಕಾರಿ) ಸ್ಥಳದಲ್ಲಿ ಹಾಜರಿದ್ದುದಾಗಿ ಸಾಕ್ಷಿ ನೀಡಿರುತ್ತಾರೆ ಎಂದು ವಿಚಾರಣಾಧಿಕಾರಿಗಳು ತಮ್ಮ ವಿಚಾರಣಾ ವರದಿಯಲ್ಲಿ ತಿಳಿಸಿರುತ್ತಾರೆ.

ಮುಂದುವರೆದು, ಅಪಾದಿತರ ರಕ್ಷಣಾ ಸಹಾಯಕ ಪಾಟೀ ಸವಾಲಿನಲ್ಲಿ ಈ ಮೇಲ್ಕಂಡ ಮೂರು ಜನ ಅಪಾದಿತರು ನೇರವಾಗಿ ತಮ್ಮ ಅಧೀನಕ್ಕೆ ಬರುವುದಿಲ್ಲವೆಂದು, ತಪಾಸಣೆಯ ದಿವಸ ತಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲವೆಂದು, ಈ ದಾಖಲೆಗಳು ಪ್ರಾ.ಸಾ.-2ರವರ ಹತ್ತಿರ ಇದ್ದವೆಂದು ಪಾಟಿ ಸವಾಲಿನಲ್ಲಿ ಹೇಳಿದ್ದಾರೆ. ಈ ಸಾಕ್ಷಿದಾರರ ಇತರೆ ಹೇಳಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿಯವರ ಸಾಕ್ಷಿಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಅಂಶಗಳು ಇಲ್ಲವೆಂದು ವಿಚಾರಣಾಧಿಕಾರಿಯವರು ತಿಳಿಸಿರುತ್ತಾರೆ.

ಈ ಪ್ರಕರಣದಲ್ಲಿ ಪ್ರಾ.ಸಾ.-2 ಶ್ರೀ ಸೋಮಶೇಖರ, ಸಹಾಯಕ ಕೃಷಿ ನಿರ್ದೇಶಕರು, ತಾವು ಸ್ವತ: ಜಮೀನಿನ ಸರ್ವೇ ಕಾರ್ಯ ಕೈಗೊಂಡಿದ್ದು, ಅನುಮೋದನೆ ಪಡೆದ ಅಂದಾಜು ಪಟ್ಟಿಗೆ ರೂ. 99.000/-ಗಳನ್ನು ಪಡೆದುಕೊಂಡಿರುತ್ತಾರೆಂದು, ಅವರು ಹಣ ಪಡೆದುಕೊಂಡಿದ್ದ ಬಗ್ಗೆ ಸ್ವೀಕೃತಿಯನ್ನು ಸಹ ನೀಡಿದ್ದಾರೆಂದು ತಿಳಿಸಿರುವುದಾಗಿ ವರದಿ ಮಾಡಿರುತ್ತಾರೆಂದು ಸಾಕ್ಷಿ ನುಡಿದಿರುತ್ತಾರೆ. ಆಪಾದಿತ ಅಧಿಕಾರಿಯವರು ತಡೆ ಆಣೆ ಕಟ್ಟೆಯ

ಮುಖ್ಯ ತಡೆಗೋಡೆ ಮಾತ್ರ ನಿರ್ಮಾಣ ಮಾಡಿದ್ದು, ಉಳಿದ ಕಾಮಗಾರಿಗಳು ಮಾಡಿಲ್ಲವೆಂದು ಸ್ಪಷ್ಟವಾಗಿ ಸಾಕ್ಷಿ ನೀಡಿರುತ್ತಾರೆ. ಮತ್ತು **"ನೆಲ್ಲೂರು ಗ್ರಾಮದಲ್ಲಿ 2006-07ನೇ ಸಾಲಿನಲ್ಲಿ ಅಂದಾಜು ಪತ್ರಿಕೆ ಮಂಜೂರಾಗಿರುತ್ತದೆ. ಹಾಗೂ ಈ ಸಾಲಿನಲ್ಲಿ ಅನುದಾನವಿಲ್ಲದ ಕಾರಣ ಇಲಾಖೆಯಿಂದ ಯಾವುದೇ ಹಣವನ್ನು ಪಡೆದಿರುವುದಿಲ್ಲ"** ಎಂದು ಸಾಕ್ಷಿ ನೀಡಿರುತ್ತಾರೆ. ಇದಕ್ಕೆ ಮಂಡನಾಧಿಕಾರಿಯವರು ಯಾವುದೇ ಪಾಟಿ ಸವಾಲು ಮಾಡಿರುವುದಿಲ್ಲ.

ಇದಕ್ಕೆ ಸಂಬಂಧಿಸಿದ ದಾಖಲೆಯನ್ನು ಗಮನಿಸಿದಾಗ ಕಾಮಗಾರಿಗೆ ಮಂಜೂರಾಗಿರುವ ಅಂದಾಜು ಮೊತ್ತಕ್ಕೂ, ಅವರು ನೀಡಿರುವ ರಶೀದಿಗೂ ಹೊಂದಾಣಿಕೆ ಆಗಿರುವುದಿಲ್ಲ. ಮತ್ತು ಮಂಜೂರಾಗಿರುವ ಹಣವು ಬಳಕೆಯಾಗಿರುವುದು ಕಂಡು ಬರುತ್ತದೆಂದು, ಸದರಿ ಪ್ರಕರಣದಲ್ಲಿ ಸರ್ಕಾರಕ್ಕೆ ಯಾವುದೇ ಹಣ ನಷ್ಟವಾಗಿಲ್ಲವೆಂದು ಅಭಿಪ್ರಾಯ ನೀಡಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ. ಅದಲ್ಲದೇ **ದಿವಂಗತರಾದ ಶ್ರೀ ಮರಿಸ್ವಾಮಿ ನಾಯಕ, ಸಹಾಯಕ ಕೃಷಿ ಅಧಿಕಾರಿ, ಹಾಗೂ ಶ್ರೀ ತಿಮ್ಮರಾಯಿ ಕೃಷಿ ಅಧಿಕಾರಿ ಇವರ ವಿರುದ್ಧದ ದೋಷಾರೋಪಣೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ. 32887/2004 (ಎಸ್.ಕೆ.ಎ.ಟಿ) ದಿನಾಂಕ: 16-08-2004 ರಡಿಯಲ್ಲಿ ಕೈಬಿಡಲಾಗಿದೆ ಹಾಗೂ ಶ್ರೀ ಕೆ. ಶಿವಲಿಂಗೇಗೌಡ ಸಹಾಯಕ ಕೃಷಿ ಅಧಿಕಾರಿ(ನಿವೃತ್ತ) ಇವರ ವಿರುದ್ಧ ಇರುವ ಆರೋಪವು ಸಾಬೀತಾಗಿಲ್ಲವೆಂದು** ಹಾಗೂ ಆರೋಪದಲ್ಲಿ ತಿಳಿಸಿರುವಂತೆ **ರೂ. 3,22,766/-**ಗಳ ನಷ್ಟ ಉಂಟಾಗಿರುವುದಿಲ್ಲವೆಂದು ನಿರ್ಣಯ ನೀಡಿರುವರು.

ವಿಚಾರಣಾಧಿಕಾರಿಯವರು ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿದ್ದು ವಿಚಾರಣೆಯನ್ನು ನಿಯಮಾನುಸಾರ ನಡೆಸಿ ಆರೋಪದ ಕುರಿತಂತೆ ಸಾಕ್ಷ್ಯಾಧಾರಗಳ ಸಹಿತ

ಸಮರ್ಪಕವಾಗಿ ಚರ್ಚಿಸಿ ನಿರ್ಣಯ ದಾಖಲಿಸಿರುವುದರಿಂದ ಸದರಿ ವಿಚಾರಣಾ ವರದಿಯನ್ನು ಅಂಗೀಕರಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 63 ಕೃಪವಿ 2009**
**ಬೆಂಗಳೂರು, ದಿನಾಂಕ: 20-05-2013.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಚಾಮರಾಜನಗರ ಜಿಲ್ಲೆಯ, ಕೊಳ್ಳೇಗಾಲ ತಾಲ್ಲೂಕಿನ ಕಾಮಗಾರಿಗಳಲ್ಲಿನ ಲೋಪ ಎಸಗಿರುತ್ತಾರೆನ್ನಲಾದ ಅಧಿಕಾರಿಗಳ ಪೈಕಿ ದಿವಂಗತರಾದ ಶ್ರೀ ಮರಿಸ್ವಾಮಿನಾಯಕ, ಸಹಾಯಕ ಕೃಷಿ ಅಧಿಕಾರಿ, ಮತ್ತು ಶ್ರೀ ತಿಮ್ಮರಾಯಿ, ಕೃಷಿ ಸಹಾಯಕ ಇವರುಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 32887/2004(SKAT) ರಲ್ಲಿ ದಿನಾಂಕ: 16-08-2004 ರಂದು ನೀಡಿದ ತೀರ್ಪಿನ ಅಡಿಯಲ್ಲಿ ವಿಚಾರಣೆಯಿಂದ ಕೈಬಿಡಲಾಗಿದೆ. ಮತ್ತು ಶ್ರೀ ಕೆ. ಶಿವಲಿಂಗೇಗೌಡ, ಸಹಾಯಕ ಕೃಷಿ ಅಧಿಕಾರಿ(ನಿ) ರವರು ವಿರುದ್ಧದ ಆರೋಪಗಳು ವಿಚಾರಣೆಯಲ್ಲಿ ಸಾಬೀತಾಗದ ಹಿನ್ನೆಲೆಯಲ್ಲಿ ಅವರನ್ನು ಆರೋಪಗಳಿಂದ ದೋಷಮುಕ್ತರನ್ನಾಗಿ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
4. ಶ್ರೀ.ಎಂ.ಜಿ.ಹಿರೇಮಠ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ನಂ. 746, 15ನೇ ಮುಖ್ಯರಸ್ತೆ, ನ್ಯಾಯಾಂಗ ಬಡಾವಣೆ, ಅಲ್ಲಾಳಸಂದ್ರ, ಜಿ.ಕೆ.ವಿ.ಕೆಅಂಚೆ, ಬೆಂಗಳೂರು-560 085.
5. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6. ಸಂಬಂಧಿಸಿದ ಅಧಿಕಾರಿಗಳು (ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ,ಇವರ ಮೂಲಕ).
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
8. ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.